(ಆ) ಈಗಿರುವ ನಿಯಮಗಳಂ ಎಲ್ಲ ನೌಕರರಿಗೆ ಅನ್ವಯಿಸುತ್ತವೆ.

(ಇ) ನಿವೃತ್ತಿ ವಯಸ್ಸಾಗಿರುವ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ನಿವೃತ್ತಿಯಾಗುವ ಸರ್ಕಾರೀ ನೌಕರರು ಅವರು ಸಲ್ಲಿಸಿದ ಸೇವಾ ಅವಧಿಯ ಆಧಾರದ ಮೇರೆಗೆ ವಿಶ್ರಾಂತಿ ವೇತನ ಹಾಗೂ ಪ್ರೋತ್ಸಾಹ ಧನವನ್ನು ಪಡೆಯುವರು. ಒಂದು ವೇಳೆ ಸರ್ಕಾರೀ ನೌಕರರು ಶಿಕ್ಷೆಯಾಗಿ ಕಡ್ಡಾಯವಾಗಿ ನಿವೃತ್ತಿಗೊಳಿಸಿದ್ದಲ್ಲಿ ಅವರಿಗೆ ನೀಡಬೇಕಾದ ವಿಶ್ರಾಂತಿ ವೇತನವನ್ನು ಕಡಿಮೆಗೊಳಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

Officers/Officials retired under Rule 285 of K. C. S. Rs.

483. SRI M. B. RAMASWAMY (Anekal).—Will the Chief Minister be pleased to state:—

(*a*) the number of officers and officials who have been retired under rule 285 of KCSRs (the Departmentwise information both minor and major Department be furnished) ;

(*b*) whether it is a fact that some of the Departments have not taken action according to instructions from Government under rule 285 ; if so, the reasons ;

(*c*) if so, the names of such Departments ?

SRI D. DEVARAJ URS (Chief Minister).—

(*a*) A Statement showing the names and other details of officers and officials retired under rule 285 of the Karnataka Civil Services Rules is placed on the Table of the House *

(*b*) All Departments have taken action.

(*c*) Does not arise.

Action against G.Os. and N.G.Os. under Rule 285 of K.C.S. Rs.

552. SRI K. H. HANUMEGOWDA (Hassan). —Will the Chief Minister be pleased to state:—

the Departments in which and the number of Gazetted and Non-Gazetted Officers against whom action has been taken under rule 285 after emergency and the reasons therefor ?

---

* Copy placed in the Karnataka Legislature Library *vide* No.35/ dated 22-3-1976.

SRI D. DEVARAJ URS (Chief Minister).—

A Statement showing the names and other details of officers and officials retired under rule 285 of Karnataka Civil Services after the emergancy is placed on the Table of the House * The reasons for their retirement have been indicated in the reply to clause (a) of Question No. 117 by Sri B. G. Banakar.

SRI B. G. BANAKAR.—May I know the number of officers against whom the disciplinary proceedings are taken and t e number of officers the disciplinary proceedings are pending. ?

† SRI D. DEVARAJ URS. —Action has been taken against 33 officers. I have no information regarding the number of pending cases.

ಶ್ರೀ ಬಿ. ಜಿ ಬನಕಾರ್.—ಡಿಪಾರ್ಟ್‌ಮೆಂಟಲ್ ಡಿಸಿಪ್ಲಿನರಿ ಪ್ರೊಸೀಡಿಂಗ್ಸ್ ಐದ್ಯೆದು, ಆರಾರು ಮೇಲ್ಪಟ್ಟು ಆಗಿದೆ. ಆನೇಕ ಜನರು ಸಸ್ಪೆಂಡ್ ಆದ ಮೇಲೂ ಆಮೇಲೆ ಹಾಜರುಪಡಿಸಿಕೊಂಡಿದ್ದಾರೆ. ಆದನ್ನು ಆದಷ್ಟು ತೀವ್ರದಲ್ಲಿ ಇತ್ಯರ್ಥಗೊಳಿಸಲಿಕ್ಕೆ ಪ್ರತಿಯೊಂದು ಡಿಪಾರ್ಟ್‌ಮೆಂಟಿನ ಎನ್‌ಕ್ವೈರಿ ಆಫೀಸರುಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅದು ಸರ್ಕಾರದ ಗಮನಕ್ಕೆ ಬಂದಿದೆ. ತೀವ್ರವಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಎಲ್ಲಾ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಕರಿಯಪ್ಪ —ಸ್ವಾಮಿ, 380ನೇ ಪ್ರಶ್ನೆಯಲ್ಲಿ ಅರ್ಹರಾಗಿರತಕ್ಕ ಅಧಿಕಾರಿಗಳನ್ನು ಕೆಲಸ ಸರಿಯಾಗಿ ಮಾಡದೇ ಕಾಲಕಳೆಯತಕ್ಕ ಅಧಿಕಾರಿಗಳನ್ನು–ಅಂತಹವರ ಲಿಸ್ಟನ್ನು ತಯಾರು ಮಾಡಿದ್ದೀರಾ? ಹಾಗೆ ಮಾಡದೇ ಹೋದರೆ ಮಾಡುತ್ತೀರಾ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆದರೆ ತಾವು 50ವರ್ಷ ಸರ್ವಿಸ್ ತುಂಬಿದವರಿಗೆ, 25ವರ್ಷ ಸೇವೆಯನ್ನು ಸಲ್ಲಿದವರಿಗೆ ಮಾತ್ರ ಲಿಸ್ಟನ್ನು ಮಾಡಬೇಕು ಎಂದು ಆಜ್ಞೆ ಮಾಡಿದ್ದೀವೆ ಎಂದು ಹೇಳಿದ್ದೀರಿ. ಆ ನನ್ನ ಪ್ರಶ್ನೆಗೆ ಇದು ಉತ್ತರವಲ್ಲ, ಇದಕ್ಕೆ ಏನು ಹೇಳುತ್ತೀರಿ ಸ್ವಾಮಿ ?

ಶ್ರೀ ಡಿ ದೇವರಾಜ್ ಅರಸ್.—ಲಿಸ್ಟ್ ಆಫ್ ಆಫೀಸರ್ಸ್ ಎಂದರೆ ಪ್ರತಿಸಾರಿ ಲಿಸ್ಟ್ ಮಾಡುವುದಿಲ್ಲ. 50ವರ್ಷಕ್ಕೆ ಬರುವವರಿಗೆ ನಾವು ಲಿಸ್ಟ್ ಮಾಡಿಕೊಂಡು, ಅವರನ್ನು ತೆಗೆಯಬೇಕೋ ಬಿಡಬೇಕೋ ಇಲ್ಲದೇ ಹೋದರೆ 50ವರ್ಷ ಯಾರು ಯಾರಿಗೆ ಆಗಿರುತ್ತದೋ ಅವರನ್ನು ಪುನಃ ಸ್ಕ್ರೀನ್ ಮಾಡಬೇಕು ಎಂದು ಇಟ್ಟುಕೊಂಡಿದ್ದೇವೆ. ಆಗಿಂದಾಗ್ಗೆ ಅವರ ಕಾಂಡೆಕ್ಟ್ ಇನ್ ಎಫಿಷಿಯನ್ಸಿ ಬಗ್ಗೆ ಬರೆದಾಗ, ರೂಲ್ಸ್ ಪ್ರಕಾರ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಹಾಗಿಲ್ಲದೇ ಹೋದರೆ 3½ಲಕ್ಷ ಜನ ನೌಕರರು ಏನಿದ್ದಾರೆ, ಅವರೆಲ್ಲರ ಲಿಸ್ಟನ್ನು ಮಾಡುತ್ತಾ ಕೂಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ನನ್ನ 382ನೇ ಪ್ರಶ್ನೆಗೆ ಕೆ.ಸಿ.ಎಸ್.ಆರ್ ರೂಲ್ 285ರ ಪ್ರಕಾರ ತಾವು ದೊಡ್ಡ ಪಟ್ಟಿಯನ್ನು ಕೊಟ್ಟಿದ್ದೀರಿ. ತಾವು ಕಾರ್ಯಕ್ರಮ ತೆಗೆದುಕೊಳ್ಳುವಾಗ, ತಾವು ಏನೇನು ಸಾಹಿತ್ಯವನ್ನು ತೆಗೆದುಕೊಂಡು ಡಿಪಾರ್ಟ್‌ಮೆಂಟ್‌ಗಳಲ್ಲಿ ನೌಕರರನ್ನು ರಿಟೈರ್‌ಮಾಡಿದ್ದೀರಿ. ಬಹುಮಟ್ಟಿಗೆ ಕ್ಲಾಸ್–4, ಕ್ಲಾಸ್–3 ನೌಕರರಿಗೆ ಯಾವ ಅಂಕಿ ಅಂಶಗಳನ್ನಿಟ್ಟುಕೊಂಡು, ಯಾವ ಕ್ರಮವನ್ನು ಅನುಸರಿಸಿ, ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಮುಖ್ಯವಾಗಿ ಪ್ರತಿವರ್ಷ ಅಧಿಕಾರವರ್ಗದಲ್ಲಿರತಕ್ಕ ಜನರ ಕಾನ್ ಫಿಡೆನ್‌ಷಿಯಲ್ ರಿಪೋರ್ಟ್ ಇರುತ್ತದೆ. ಆ ರಿಪೋರ್ಟಿನ ಆಧಾರವನ್ನು ಮುಖ್ಯವಾಗಿ ಇಟ್ಟುಕೊಳ್ಳುತ್ತೇವೆ ಮತ್ತು ಅವರ ಕೆಲಸಕಾರ್ಯಗಳನ್ನು ಯಾವರೀತಿ ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆಯೇ ಇಲ್ಲವೇ ಎನ್ನುವುದೆಲ್ಲಾ ಆದರಲ್ಲಿ ಇರುತ್ತದೆ. ಮತ್ತು ಅಧಿಕಾರಿ ಬಗ್ಗೆ ಜನರಲ್ಲಿ ಏನು ಇಂಪ್ರೆಷನ್ ಇರುತ್ತದೆ ಹಾಗೂ ತಾಲ್ಲೂಕಿನಲ್ಲಿ ತಹಶೀಲ್ದಾರ್ ಆಗಲಿ, ಇನ್‌ಸ್ಪೆಕ್ಟರಾಗಲೀ ಚೆನ್ನಾಗಿ ಕೆಲಸ ಮಾಡುತ್ತಾರೋ, ಮಾಡು

---

* Copy placed in the Karnataka Legislature Library *vide* No. 35 (a) dated 22-3-1976.

ವುದಿಲ್ಲವೋ ಎನ್ನುವುದನ್ನು ಯಾವ ಆಧಾರದಿಂದ ಹೇಳುತ್ತೀವೆಯೋ ಹಾಗೆಯೇ ಅವರ ನಡವಳಿಕೆ, ಅವರ ಕಾರ್ಯಕ್ರಮದ ವಿಧಾನಗಳಲ್ಲಿ ಜನಗಳಲ್ಲಿ ಮಿಳಿತವಾಗುವಿಕೆ ಮತ್ತು ಯಾವುದಾದರೂ ವಿಷಯ ಬಂದರೆ ಅದನ್ನು ಟ್ಯಾಕಲ್ ಯಾವ ರೀತಿ ಮಾಡುತ್ತಾರೆ ಎಂದು ಹೇಳುತ್ತೀರೋ ಅದೇ ರೀತಿ ನಾವು ನೋಡುತ್ತೀವೆ. ಇದರ ಬಗ್ಗೆ ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿ ಮತ್ತು ಸ್ಟೇಟ್ ಲೆವೆಲ್ ಕಮಿಟಿ ಎಂದು ಎರಡು ಕಮಿಟಿಗಳನ್ನು ಮಾಡಿದ್ದೇವೆ. ಆ ಕಮಿಟಿಯವರು ಸ್ಕ್ರೀನ್ ಮಾಡಿ ಆದಮೇಲೆ ಒಪ್ಪುವುದು ಬಿಡುವುದು ಸರ್ಕಾರ ಮಾಡುತ್ತದೆ. ನಾವು ಹೆಚ್ಚಾಗಿ ಕ್ಲಾಸ್-3, ಕ್ಲಾಸ್-4 ಬಗ್ಗೆ ಹೇಳಿದಿರಿ. ಕ್ಲಾಸ್-2 ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುವ ಹಾಗಿಲ್ಲ. ಕ್ಲಾಸ್-2, ಕ್ಲಾಸ್-1 ಆಫೀಸರ್ಸ್ 528ರ ಪೈಕಿ 46 ಜನ ಕ್ಲಾಸ್-1 ಆಫೀಸರ್ಸ್ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. 49 ಜನ ಕ್ಲಾಸ್-2 ಆಫೀಸರ್ಸ್ ಮೇಲೆ ಕ್ರಮ ತೆಗೆದುಕೊಂಡಿದೆ ವೆ. ಬಾಕಿಯವರು ಕ್ಲಾಸ್-3, ಕ್ಲಾಸ್-4 ಇದ್ದಾರೆ.

ಶ್ರೀ ಸಿ. ಬೈರೇಗೌಡ.—ತಾವು ಕಾರ್ಯಕ್ರಮ ತೆಗೆಂಕೊಂಡಿರುವುದರಲ್ಲಿ ಆಲ್ ಇಂಡಿಯಾ ಸರ್ವಿಸ್, ಐ.ಎ.ಎಸ್., ಐ ಪಿ ಎಸ್., ಐ ಎಫ್.ಎಸ್ ಈ ತರಹ ಅಧಿಕಾರಿಗಳು ಎಷ್ಟು ಜನ ಇದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಆಲ್ ಇಂಡಿಯಾ ಸರ್ವಿಸ್ ರಿಟೈರಿನ ಪಟ್ಟಿಯಲ್ಲಿ ಬಂದ ಹಾಗಿಲ್ಲ; ಡಿಪಾರ್ಟ್‌ಮೆಂಟ್ ಎನ್‌ಕ್ವೈರಿಯಲ್ಲಿ ಒಂದೆರಡು ಬಂದು ಹೋಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಪಟ್ಟಿಯನ್ನು ನೋಡಿದರೆ ಇದರಲ್ಲಿ ಕೆಲವು ಜನ ಪ್ರಾಮಾಣಿಕರು ಇದ್ದಾರೆ ಎನ್ನುವುದಕ್ಕೆ ಅನೇಕ ಮಾಹಿತಿ ನಮ್ಮಲ್ಲಿವೆ. ಒಳ್ಳೆಯ ಅಧಿಕಾರಿಗಳು ದಕ್ಷ ಅಧಿಕಾರಿಗಳು ಏನಿದ್ದಾರೆ ಅವರಿಗೆ ಎನ್‌ಕ್ವೈರಿ ಆಗದೆ ಕುಂಟುನೆಪ ಹಾಕಿ 285 ರೂಲನ್ನು ಅಪ್ಲೈ ಮಾಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ? ತಾವು ಈಗ ಹೇಳಿದ ಹಾಗೆ ರಚನೆ ಮಾಡಿರತಕ್ಕ ಎರಡು ಸಮಿತಿಗಳು ಮತ್ತೆ ಪರಿಶೀಲನೆಮಾಡಿ ಯಾರಿಗೆ ಅನ್ಯಾಯವಾಗಿದೆಯೋ ಅವರಿಗೆ ರಕ್ಷಣೆ ಮಾಡುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಈಗ ಅದಕ್ಕೂ ಒಂದು ಗವರ್ನಮೆಂಟ್ ಆರ್ಡರ್ ಮಾಡಿದೆ. ಈ ಎರಡು ಕಮಿಟಿಗಳು ಇವೆಯಲ್ಲ ಇದರಲ್ಲಿ ಡಿವಿಜನಲ್ ಕಮಿಟಿಯವರು ಮೊದಲು ಶಿಫಾರಸು ಮಾಡಿ ಯಾವ ಅಧಿಕಾರಿಗಳು ತೆಗೆದುಹಾಕಲ್ಪಟ್ಟಿರುತ್ತಾರೆ ಅವರು ಸ್ಟೇಟ್ ಲೆವೆಲ್ ಕಮಿಟಿಗೆ ಅಪೀಲು ಮಾಡಿಕೊಳ್ಳಬಹುದು ಸ್ಟೇಟ್ ಲೆವೆಲ್ ಕಮಿಟಿಯವರು ಪುನರ್ಪರಿಶೀಲನೆ ಮಾಡುತ್ತಾರೆ. ಸ್ಟೇಟ್ ಲೆವೆಲ್ ಕಮಿಟಿಯವರು ಯಾವ ಯಾವ ಅಧಿಕಾರಿಗಳನ್ನು ಸ್ಕ್ರೀನ್ ಮಾಡುತ್ತಾರೋ ಅದರ ಮಂತ್ರಾಂತರ ಗವರ್ನಮೆಂಟಿನವರು ಫೈನಲ್ ತೀರ್ಮಾನ ತೆಗೆದುಕೊಳ್ಳುತ್ತಾರೆ. ಒಟ್ಟಿನಲ್ಲಿ ಪುನರ್ಪರಿಶೀಲನೆಗೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಐ ಎ.ಎಸ್ ಅಧಿಕಾರಿಯವರ ಮನೆಯನ್ನು ರೈಡ್‌ಮಾಡಿ ಅನೇಕ ಆಭರಣಗಳು ಸಿಕ್ಕಿತು ಎಂದು ಪೇಪರಿನಲ್ಲಿ ಬಂದಿತ್ತು. ಆದರೆ ಆ ಐ.ಎ.ಎಸ್ ಅಧಿಕಾರಿ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ತಿಳಿದು ಬಂದಿದೆ ಇದು ನಿಜವೇ; ಇದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್.—ಪತ್ರಿಕೆಯಲ್ಲಿ ಬಂದಿರುವುದನ್ನು ಎಲ್ಲಾ ಕಾಲದಲ್ಲೂ ನಂಬುವುದಕ್ಕೆ ಸಾಧ್ಯವಿಲ್ಲ. ಇದು ಅಂತಹ ಒಂದು ಸಂದರ್ಭ. ಪತ್ರಿಕೆಯಲ್ಲಿ ಬಂದಿರುವುದು ಸರಿಯಲ್ಲ.

ಶ್ರೀ ಟಿ ಆರ್. ಶಾಮಣ್ಣ —ಅನೇಕ ಸಂದರ್ಭದಲ್ಲಿ ಈ ಮನೆಯಲ್ಲಿ ಮತ್ತು ಬೇರೆ ಕಡೆ ಅಧಿಕಾರಿಗಳು ಅದಕ್ಷತೆ ಮತ್ತು ಕರಪ್ಷನ್ ಮಾಡುವವರ ಬಗ್ಗೆ ತಾವು ತೆಗೆದುಕೊಳ್ಳತಕ್ಕ ಪ್ರತಿಯೊಂದು ಕ್ರಮಕ್ಕೂ ಬೆಂಬಲ ಕೊಡುವುದು ಅವಶ್ಯಕ. ಆದರೆ ಕೆಲವು ಸಂದರ್ಭದಲ್ಲಿ ಇನ್‌ಎಫಿಷಿಯನ್ಸಿ, ಕರಪ್ಷನ್‌ಬಗ್ಗೆ ವೈಯಕ್ತಿಕವಾಗಿ ಅನೇಕ ಕಾರಣಗಳಿಂದ ತೊಂದರೆಯಾಗಿದೆ. ಅದನ್ನು ಸರಿಪಡಿಸುವುದರಲ್ಲಿ ಅನ್ಯಾಯ ನಿಜವಾಗಿ ಆಗಿದ್ದರೆ, ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ನಾನು ಈಗ ತಾನೆ ಮಾನ್ಯ ರಾಮಸ್ವಾಮಿಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.—ಆರ್ ಇಂಡಿಯಾ ಸರ್ವೀಸಸ್ ಡಿಪಾರ್ಟ್‌ಮೆಂಟ್ ಎನ್‌ಕ್ವೈರಿಯಲ್ಲಿ ಒಬ್ಬಿಬ್ಬರು ಬಂದಿರಬಹುದು ಎಂದು ಹೇಳಿದಿರಿ. ಅವರ ಹೆಸರನ್ನು ತಿಳಿಸುವುದಕ್ಕೆ ಸಾಧ್ಯವಿದೆಯೇ ?

1-30 P. M.

ಶ್ರೀ ಡಿ. ದೇವರಾಜ ಅರಸ್.—ಇದು ಎಲ್ಲಾ ಗವರ್ನಮೆಂಟ್ ಆಫ್ ಇಂಡಿಯಾದ ಮುಂದೆ ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಅನಿಮಲ್ ಹಸ್ಬಂಡರಿ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬ ಅಧಿಕಾರಿ ಕೇವಲ ಟಿ.ಎ ಬಿಲ್ ಹಾಕಿದ ಎನ್ನುವಕ್ಕಂಥದ್ದರ ಮೇಲೆ ಅದನ್ನು ವಿಜಿಲೆನ್ಸ್ ಕಮಿಷನ್‌ಗೆ ಹಾಕಿ ಕಂಪಲ್ಸರಿ ರಿಟೈರ್‌ಮೆಂಟ್ ಮಾಡಿರುವಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಿಲ್ಲನ್ನು ಪ್ರಿಫೇರ್ ಮಾಡಿದ್ದರೆ, ಅದನ್ನು ಡಿಸ್ ಆರೋ ಮಾಡುವಕ್ಕೆ ಅಧಿಕಾರ ಸರ್ಕಾರಕ್ಕೆ ಇದೆ, ಮತ್ತು ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟಿಗೂ ಇದೆ. ಒಂದು ಕುಂಟು ನೆಪ ಹಾಕಿ ಅವರನ್ನು ಕಂಪಲ್ಸರಿ ರಿಟೈರ್ ಮಾಡುವಕ್ಕದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಇದನ್ನು ಇನ್ನೊಂದು ಸಾರಿ ಪರಿಶೀಲನೆ ಮಾಡಿ ಆ ಅಧಿಕಾರಿಗೆ ಪರಿಹಾರ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಧಿಕಾರಿಗಳ ಮೇಲೆ ಯಾವುದಾದರೂ ರೂಲ್ಸ್ ಪ್ರಕಾರ ಶಿಕ್ಷೆ ಮಾಡುವುದಾದರೆ ಅದು ಸರ್ಕಾರದ ಮುಂದೆ ಬರುತ್ತದೆ. ಕ್ಯಾಬಿನೆಟ್‌ನವರು ಈ ಅಧಿಕಾರಿಯ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಒಂದು ಸಾರಿ ಕ್ಯಾಬಿನೆಟ್ ತೀರ್ಮಾನವಾದ ಮೇಲೆ ಅದು ಫೈನಲ್ ಆಯಿತು. ವಿಶೇಷವಾದಂಥ ಸಂದರ್ಭದಲ್ಲಿ ಅಧಿಕಾರಿಗಳು ಗವರ್ನರ್ ಅವರಿಗೆ ಅಪೀಲು ಹೋದಾಗ ಅದು ಪುನಃ ನಮಗೆ ಬರುತ್ತದೆ, ಅದನ್ನು ನಾವು ಪುನಃ ಪರಿಶೀಲನೆ ಮಾಡಿ ಅದನ್ನು ನಾವು ಬದಲಾಯಿಸಬಹುದು ಅಥವಾ ಸರಿಯಿದ್ದರೆ ಸರಿ ಇದೆಯೆಂದು ಹೇಳಬಹುದು. ಈಗಲೇ ಆ ಅಧಿಕಾರಿಯ ಬಗ್ಗೆ ಏನನ್ನೂ ಹೇಳಲಕ್ಕೆ ಬರುವುದಿಲ್ಲ. ತಾವು ಹೇಳುವಂಥ ಒಂದು ನೆಪದಿಂದ ಯಾವ ಅಧಿಕಾರಿಯೂ ರೂಲ್ 285ರ ಕೆಳಗೆ ರಿಟೈರ್ ಆಗಿರುವುದು ಇಲ್ಲ ಎಂದು ನನ್ನ ಭಾವನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಉತ್ತರ ಕೊಡುತ್ತಾ, ಐ ಎ ಎಸ್ ಮತ್ತು ಐ ಪಿ ಎಸ್ 3-4 ಜನ ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದನ್ನು ಇನಿಷಿಯೇಟ್ ಮಾಡಿದ್ದೇವೆಂದು ಹೇಳಿದಿರಿ. ಅವರು ಯಾರು ಎಂದು ತಿಳಿಸುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ಇನ್ನು ಮುಖ್ಯಮಂತ್ರಿಗಳು ಅವರ ಹೆಸರುಗಳನ್ನು ಹೇಳುವುದಿಲ್ಲ ಎಂದು ಆಗಲೇ ಹೇಳಿದರು.

ಶ್ರೀ ಟಿ. ಎಂ. ಮಂಜುನಾಥ್.—ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಅವರ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ಸ್ ಮತ್ತು ನಮ್ಮಂಥವರು ಯಾರಾದರೂ ಅವರ ಬಗ್ಗೆ ಹೇಳಿದರೆ, ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರಿ ಅನೇಕ ಸಂದರ್ಭದಲ್ಲಿ ಕೆಲವರು ಅಧಿಕಾರಿಗಳ ಮೇಲೆ ಹೈಕೋರ್ಟಿನವರು, ಇವರು ಮಾಡಿರುವಕ್ಕದ್ದೂ ಉಚಿತವಲ್ಲ, ಎಂದು ಸರ್ಕಾರದ ಗಮನಕ್ಕೆ ತಂದರೂ ಸಹ ತಾವು ಉದಾಸೀನ ಮಾಡಿದ್ದೀರಿ. ಇದರ ಅರ್ಥ ಏನು ?

ಶ್ರೀ ಡಿ. ದೇವರಾಜ ಅರಸ್.—ಯಾವ ಕೇಸು, ಯಾವುದನ್ನು ಉದಾಸೀನ ಮಾಡಿದ್ದೇನೆ ಎನ್ನುವ ವಿವರವನ್ನು ಮಾನ್ಯ ಸದಸ್ಯರು ಹೇಳಿದ್ದರೆ, ನಾನು ಸುಲಭವಾಗಿ ಇಲ್ಲ ಎಂದು ಹೇಳುತ್ತೇನೆ. ನಿರ್ದಿಷ್ಟವಾಗಿ ಇಂಥ ಕೇಸು, ಎಂದು ಹೇಳಿಬೇಕು. ನಿಮ್ಮ ಇಚ್ಛೆ ಪ್ರಕಾರ ತೀರ್ಮಾನವಾಗಿಲ್ಲ ಎಂದರೆ ಉದಾಸೀನ ಮಾಡಿದ್ದೇನೆ ಎಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಈಗ ನಮ್ಮಲ್ಲಿ ಎರಡು ತರಹ ಎನ್‌ಕ್ವಯರಿಗಳು ಇವೆ. ಒಂದು ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಮತ್ತೊಂದು ವಿಜಿಲೆನ್ಸ್ ಕಮಿಷನ್ ಎನ್‌ಕ್ವಯರಿ. ಈ ಎರಡರಲ್ಲಿ ಯಾವುದು ಬೆಸ್ಟ್ ಎಂದು ತಮ್ಮ ಅನುಭವಕ್ಕೆ ಬಂದಿದೆ. ತಮ್ಮ ಅಭಿಪ್ರಾಯದಲ್ಲಿ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಒಳ್ಳೆಯದು ಎಂದು ಕಂಡುಬಂದರೆ, ವಿಜಿಲೆನ್ಸ್‌ನ ಕಮಿಷನ್‌ನ ವರ್ಕನ್ನು ತಾವು ಏಕೆ ಕಡಿಮೆ ಮಾಡಬಾರದು ?

ಶ್ರೀ ಡಿ. ದೇವರಾಜ ಅರಸ್.—ಎರಡೂ ಒಳ್ಳೆಯದು. ಆದರೆ ಯಾವುದಾದರೂ ಕೇಸ್ ಬಹಳ ಸೀರಿಯಸ್ ಅಲಗೇಷನ್ಸ್ ಇದ್ದರೆ, ವಿಜಿಲೆನ್ಸ್ ಕಮೀಷನ್‌ಗೆ ರೆಫರ್‌ಮಾಡುತ್ತಾರೆ, ರೋಟೀನ್ ಮ್ಯಾಟರ್ಸ್ ಆದರೆ, ಇಂಡಿಸಿಪ್ಲಿನ್ಡ್ ಮ್ಯಾಟರ್ಸ್ ಆದರೆ ಅಂಥಾದ್ದನ್ನು ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿಯವರೇ ನೋಡುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.- ಅನ್ಯಾಯಕ್ಕೆ ಒಳಗಾಗಿರತಕ್ಕ ಅಧಿಕಾರಿಗಳು ತಮಗೆ ಅಹವಾಲನ್ನು ಕೊಟ್ಟರೆ, ಅವರಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ಪುನಃ ಪರಿಶೀಲನೆ ಮಾಡುತ್ತೇವೆಂದು ತಾವು ಆಶ್ವಾಸನೆ ಕೊಟ್ಟಿದ್ದೀರಿ. ಪುನಃ ಪರಿಶೀಲನೆ ಮಾಡುವುದಕ್ಕೆ ಈಗ ಇರತಕ್ಕ ಸಮಿತಿಯೇ ಸಾಕು ಎಂದು ಹೇಳುತ್ತೀರಾ ಅಥವಾ ಪ್ರತ್ಯೇಕವಾದಂಥ ಸಮಿತಿಯನ್ನು ನಿರ್ಮಾಣ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಕೆಳ ಮಟ್ಟದಲ್ಲಿ ನಡೆಯತಕ್ಕಂಥ ಇನ್‌ವೆಸ್ಟಿಗೇಷನ್ ಆಗಲೀ, ರಿವ್ಯೂ ಆಗಲ ಮಾಡತಕ್ಕಂಥಾದ್ದಕ್ಕೆ ಒಂದು ಸ್ಟೇಟ್ ಲೆವಲ್ ಕಮಿಟಿ ಎಂದು ಮಾಡಿದೆ. ಆ ಕಮಿಟಿಯವರು ಇಂಥ ಕೇಸುಗಳನ್ನು ನೋಡುತ್ತಾರೆ ಮತ್ತು ಸರ್ಕಾರಕ್ಕೆ ಶಿಫಾರಸ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ಟೇಟ್ ಲೆವೆಲ್ ಕಮಿಟಿ ಇದೆ. ಆದರೆ ನಮ್ಮ ಸರ್ಕಾರದ ಕಾರ್ಯದರ್ಶಿಯವರೊಬ್ಬರ ಮೇಲೆ ಗುರುತರವಾದ ಅಪಾದನೆ ಇದ್ದು ಅವರ ಮನೆಯನ್ನು ರೈಡ್ ಮಾಡಿದ್ದಾರೆ. ಅವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಅಪಾದನೆ ಪ್ರೂವ್ ಆಗುವವರೆಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅದು ಸಿ.ಬಿ.ಐ ನವರ ಎನ್‌ಕ್ವಯರಿಯಲ್ಲಿದೆ.

ಶ್ರೀ ಸಿ. ಬೈರೇಗೌಡ —ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಎರಡು ತರಹದ ಎನ್‌ಕ್ವಯರಿ ಬಗ್ಗೆ ಒಂದು ರೆಕಮಂಡೇಷನ್ ಕೊಟ್ಟಿದ್ದಾರೆ. ಕೆಲವೊಂದು ಸಂದರ್ಭದಲ್ಲಿ ಸೀರಿಯಸ್ ಆಗಿರತಕ್ಕ ಆಫೆನ್ಸಸ್ ಇದ್ದರೂ ಕೂಡ ಅದನ್ನು ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿಗೆ ರೆಫರ್ ಮಾಡುವುದು, ಸೀರಿಯಸ್ ಇಲ್ಲದೆ ಇರತಕ್ಕ ಆಫೆನ್ಸಸ್‌ಗಳನ್ನು ವಿಜಿಲೆನ್ಸ್ ಕಮೀಷನ್‌ಗೆ ರೆಫರ್‌ಮಾಡುವುದು ಆಗಿದೆ. ಇಂಥ ತಾರತಮ್ಯವನ್ನು ಮಾಡುವುದಕ್ಕೆ ಕಾರಣ ಏನು ?

SRI. D. DEVARAJ URS.—It depends upon the nature of offence. If the Minister feels that such and such a case should go to Vigilance, they will send such cases. ಇದರಲ್ಲಿ ತಾರತಮ್ಯ ಏನು ಬಂತು. ಅಪರಾಧಿಯಾಗಿದ್ದವನು ಶಿಕ್ಷೆಗೆ ಒಳಗಾಗಬೇಕು. ನಿರಪರಾಧಿಯಾದವನಿಗೆ ವಿಜಿಲೆನ್ಸ್ ಕಮಿಷನ್‌ನವರು ಎನ್‌ಕ್ವಯರಿ ಮಾಡಿದರೆ ಏನು ? ಎಲ್ಲವನ್ನೂ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಮಾಡುವುದಕ್ಕಾಗುವುದಿಲ್ಲ. ಕೆಲವು ಸೀರಿಯಸ್ ಆಫೆನ್ಸಸ್ ಬಂದಾಗ ಬರೀ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿಗೆ ಒಳಗಾಗದಂಥ ಅಧಿಕಾರಿಗಳೂ ಇರುತ್ತಾರೆ. ಇಂಥಾದ್ದನ್ನೆಲ್ಲಾ ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ.

Audit of Accounts of L.S.S. Motakpalli

61 SRI J. P. SARWESH (Sedam).—Will the Minister for Co-operation be pleased to state :—

(*a*) whether any complaints were received by Government regarding illegal activities and improper functioning of L. S. S. Motakpalli, Taluk Sedam ;

(*b*) whether special audit of accounts of L.S.S. Motakpalli was done ;